Sri. M.C. NANAIAH :— As Minister for Parliamentary Affairs, I am really sorry. We will ensure that these things will not happen in future. ಇದಕ್ಕೆ ಉತ್ತರವನ್ನು ನಾಳೆ ಕೊಡುತ್ತೇನೆ.

ಪುತ್ತೂರು ಪುರಸಭೆಯ ಮುಖ್ಯಾಧಿಕಾರಿಯಿಂದ ನಡೆದಿರುವ ಅವ್ಯವಹಾರದ ಬಗ್ಗೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ, ಪುತ್ತೂರು ಪುರಸಭೆ ಒಂದು ದೊಡ್ಡ ಅವ್ಯಸ್ಥೆಯ ಆಗರವಾಗಿದೆ. ಅಲ್ಲಿಯ ಮುಖ್ಯಾಧಿಕಾರಿ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆ. ಪುರಸಭೆಗೆ ಬರಬೇಕಾದಂಥ ಆದಾಯದ ಮೂಲವಾದ ಮಾರುಕಟ್ಟೆಯನ್ನು ಹರಾಜಿನ ಮೂಲಕ ಕೊಡದೆ, ಅಧ್ಯಕ್ಷರ ಜೊತೆ ಶಾಮೀಲಾಗಿ ಹಿಂದಿನ ಮಟ್ಟಕ್ಕೆ ಸ್ವಲ್ಪ ಏರಿಸಿ ಈ ವರ್ಷ ಆದನ್ನು ಖಾಯಂ ಮಾಡಿ, ಪುರಸಭೆಗೆ ಬರುವಂಥ ಆದಾಯಕ್ಕೆ ತೊಂದರೆ ಮಾಡಿದ್ದಾರೆ. 'ಆಶ್ರಯ' ಯೋಜನೆಯ ಮನೆಗಳನ್ನು ಮಂಜೂರು ಮಾಡಿದ್ದರೂ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡದೆ ಸತಾಯಿಸುತ್ತಿದ್ದಾರೆ. ಕಂದಾಯ ಇಲಾಖೆ ಮನೆ ನಿವೇಶನಕ್ಕಾಗಿ 18 ಎಕರೆ ಜಾಗವನ್ನು ಕೊಟ್ಟು ನಾಲ್ಕು ತಿಂಗಳು ಕಳೆದರೂ ಕೂಡ, ಆದನ್ನು ನಿವೇಶನವಾಗಿ ಪರಿವರ್ತಿಸದೆ, ಮನೆಗಳ ನಿವೇಶನ ಹಂಚಿಕೆ ಮಾಡಲು ತೊಂದರೆ ಮಾಡಿದ್ದಾರೆ. ಲೋಕೋಪಯೋಗಿ ರಸ್ತೆಯ ಬದಿಯಲ್ಲಿ ಗೂಡಂಗಡಿ ರಚಿಸುವಂತೆ ಕಾನೂನಿಗೆ ವಿರುದ್ಧವಾಗಿ ಲೈಸೆನ್ಸನ್ನು ನಿಡುವಂಥ ಕೆಲಸಗಳನ್ನು ಮಾಡಿ ಸಾರ್ವಜನಿಕರ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಪುರಸಭೆಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಸ್ಥಾಯಿ ಸಮಿತಿಯ ಸಭೆ ಕರೆಯಬೇಕೆಂದು ಸೂಚಿಸಿದ್ದರೂ ಕೂಡ ಸ್ಥಾಯಿ ಸಮಿತಿಯ ಸಭೆ ಕರೆಯದೆ ಅಲ್ಲಿ ಯಾವುದೇ ಕಾಮಗಾರಿ ನಡೆಯದ ಹಾಗೆ ತಡೆ ಉಂಟು ಮಾಡಿದ್ದಾರೆ. ಇವತ್ತು ಅಲ್ಲಿ ಪುರಸಭೆಯ ಸದಸ್ಯರು ಮತ್ತು ಮಾಜಿ ಶಾಸಕರು ಪ್ರತಿಭಟನೆ ಮಾಡುವಂಥ ಒಂದು ಅನಿವಾರ್ಯ ಸಂದರ್ಭ ಉಂಟಾಗಿದೆ. ಅಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಈ ಮುಖ್ಯಾಧಿಕಾರಿ ತನ್ನ ಸರ್ವಾಧಿಕಾರ ಪ್ರವೃತ್ತಿಯನ್ನು ತೋರಿಸುತ್ತಿದ್ದಾನೆ. ಈ ರೀತಿ ಹದ್ದುಮೀರಿ, ಕಾನೂನಿಗೆ ವ್ಯತಿರಿಕ್ತವಾಗಿ ತನ್ನ ಸ್ವಾರ್ಥಕ್ಕೆ ಅನುಗುಣವಾಗಿ ಮತ್ತು ಜನ ವಿರೋಧಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವಂಥ ಪುತ್ತೂರು ಪುರಸಭೆಯ ಮಖ್ಯಾಧಿಕಾರಿಯನ್ನು ತಕ್ಷಣ ಅಮಾನತ್ತಿನಲ್ಲಿಡಬೇಕು ಮತ್ತು ಬದಲಿ ಮುಖ್ಯಾಧಿಕಾರಿಯನ್ನು ನೇಮಕ ಮಾಡಬೇಕು ಮತ್ತು ಆ ಮುಖ್ಯಾಧಿಕಾರಿಯ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೋಳ್ಳಬೇಕು ಎಂದು ನಾನು ಸರ್ಕಾರವನ್ನು ಆಗ್ರಹ ಮಾಡುತ್ತಿದ್ದೇನೆ.

ಶ್ರೀ. ಎಂ.ಸಿ. ನಾಣಯ್ಯ:— (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಸಭಾಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿ ಉತ್ತರವನ್ನು ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:— ಮಾನ್ಯ ಅಧ್ಯಕ್ಷರೇ, ತಾವು ಈಗ ತಾನೇ ಹೇಳಿದ್ದೀರಿ, ಇದಕ್ಕೆ ಸಂಬಂಧಪಟ್ಟ ಸಚಿವರಾದ ಮೀರಾಜುದ್ದೀನ್ ಎನ್. ಪಾಟೀಲರು ಇಲ್ಲಿ ಇಲ್ಲ. ಈ ರೀತಿಯಾದರೆ ಹೇಗೆ?

ಅಧ್ಯಕ್ಷರು :— ಅವರು ನನಗೆ ಬರೆದು ತಿಳಿಸಿದ್ದಾರೆ. ಕೌನ್ಸಿಲ್‌ನಲ್ಲಿ ಅವರದ್ದು ಯಾವುದೋ ಬಿಸಿನೆಸ್ ಇದೆ ಎಂದು ತಿಳಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಅಲ್ಲೆ ಹೋಗಿ ನೋಡಿಕೊಂಡು ಬಂದು ನಿಮಗೆ ರಿಪೋರ್ಟ್ ಮಾಡುತ್ತೇನೆ.

ಅಧ್ಯಕ್ಷರು:— ನಾನು ಯಾರನ್ನೂ ರಕ್ಷಿಸುವುದು ಅಥವಾ ಹಿಡಿದುಕೊಂಡುವುದನ್ನು ಮಾಡುವುದಿಲ್ಲ, ನನ್ನಲ್ಲಿ ಸುಮಾರು ಚೀಟಿಗಳಿವೆ. ಈಗ ಅನಂತನಾಗ್‌ರವರು ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದನ್ನೂ ಇಲ್ಲಿ ಇಟ್ಟುಕೊಂಡಿದ್ದೇನೆ. ಅವರಿಗೆ ಸಂಬಂಧಿಸಿದ ವಿಷಯ ಬಂದಾಗ ರೆಫರ್ ಮಾಡಿ ಹೇಳಲು ಒಬ್ಬೊಬ್ಬರು ಕಳುಹಿಸಿದ ಪತ್ರಗಳನ್ನೂ ಸಾಧ್ಯವಾದಷ್ಟು ಮಟ್ಟಿಗೆ ಇಟ್ಟುಕೊಂಡಿರುತ್ತೇನೆ. ಮಿರಾಜುದ್ದೀನ್ ಅವರು ನನಗೆ ಬರೆದು ಕಳುಹಿಸಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಅಲ್ಲಿ ಸ್ಟ್ರೈಕ್ ಕೂಡ ನಡೆಯುತ್ತಿದೆ. ಆದುದ್ದರಿಂದ ದಯವಿಟ್ಟು ನಾಳೆಯಾದರೂ ಉತ್ತರ ಕೊಟ್ಟರೆ ಒಳೆಯದು.

ಶ್ರೀ ಎಂ.ಸಿ. ನಾಣಯ್ಯ :— ಮಾಹಿತಿಯನ್ನು ತರಿಸಿ ನಿಮಗೆ ಉತ್ತರವನ್ನು ನಾಳೆ ಅಥವಾ ನಾಡಿದ್ದು ಕೊಡುತ್ತೇವೆ.

(ಊ) ವಿಟ್ಲನಗರ ಪಂಚಾಯಿತಿ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಎ. ರಕ್ಮಯ್ಯ ಪೂಜಾರಿ (ವಿಟ್ಲ) :— ಮಾನ್ಯ ಅಧ್ಯಕ್ಷರೇ ನಮ್ಮ ನಗರ ಪಂಚಾಯಿತಿಯ ಪ್ರದೇಶದ ಒಳಗಿರುವ ಜನರಿಗೆ ಕುಡಿಯುವ ನೀರಿಗಾಗಿ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಒಂದು ಪ್ರಾಂತ್ಯ ಯೋಜನೆ ಕಾರ್ಯಗತವಾಗಿ ಕಳೆದ ವರ್ಷ ಪೂರ್ತಿ ಕೆಲಸವಾಗಿ ಉದ್ಘಾಟನೆ ಮಾಡಿ ಪಂಚಾಯಿತಿಗೆ ಕೊಡಲಾಗಿದೆ. ಆದರೆ ಆ ಪ್ರದೇಶದ ಮೂರನೇ ಒಂದು ಪ್ರದೇಶದ ಜನರಿಗೂ ಇದರಿಂದ ಪ್ರಯೋಜನವಾಗುತ್ತಿಲ್ಲ. ಅಷ್ಟೇ ಅಲ್ಲ, ಅಲ್ಲಿ ಅದಂಥ ಕೆಲಸಗಳಿಗೂ ಕೂಡ ಕಳಪೆ ಕಾಮಗಾರಿಗಳು. ಈ ಕಳಪೆ ಕಾಮಗಾರಿಗಳಿಂದಾಗಿ ಆಗಾಗ ನೀರಿನ ಪೈಪೂ ಕೂಡ ಒಡೆದು ಹೋಗಿ ಆ ಪ್ರದೇಶದ ಜನರಿಗೆ ನೀರು ಕೊಡಲು ಆಗುವುದಿಲ್ಲ. ಆದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ, ಆ ಪ್ರದೇಶದ ಎಲ್ಲಾ ಜನರಿಗೆ ನೀರು ಕೊಡುವ ಹಾಗೆ ಮಾಡಬೇಕು